ಈ ದಿನ ದಿನಾಂಕಃ 06-02-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

3. ಸರ್ವೆ ನಂಃ 9/1 ರ ಆಸ್ತಿಯು ಮೂಲತಃ ವಾದಿಯ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ . ಸರ್ವೆ ನಂಃ 9/1 ರ 3 ಎಕರೆ 13 ಗುಂಟೆ ಜಮೀನು ವಿಭಾಗದಲ್ಲಿ ವಾದಿಯ ತಂದೆ ರಂಗಪ್ಪನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ . ಸದರಿ ಆಸ್ತಿಯ ಚೆಕ್ಕು ಬಂಧಿ ಪೂರ್ವಕ್ಕೆ ಬ್ಲಾಕ್ ನಂ 2 ರ ಹಿಸ್ಸಾ ಹಾಗೂ ಸರ್ವೆ ನಂಃ 7 ಮತ್ತು 8 ರ ಜಮೀನು, ಪಶ್ಚಿಮಕ್ಕೆ ಲಾಗು ಹಿಸ್ಸಾ ನಂಃ  3 , 5 ಮತ್ತು 9 ರ ಜಮೀನು, ಉತ್ತರಕ್ಕೆ ಬೆಳಲಗೆರೆ ಗಡಿ ಹಾಗೂ ಲಾಗು ಹಿಸ್ಸಾ 2, 7, 8 ಮತ್ತು 9 ರ ಜಮೀನು, ದಕ್ಷಿಣಕ್ಕೆ ಲಾಗು ಸಂಃ 10 ರ ಜಮೀನು ಇರುತ್ತದೆ ಎಂದರೆ ಪೂರ್ವಕ್ಕೆ ಕರಿಕಟ್ಟೆ ಬಸವರಾಜು, ಪಶ್ಚಿಮಕ್ಕೆ ಬಿ ಶೇಖರಪ್ಪನ ಜಮೀನು, ಉತ್ತರಕ್ಕೆ ಹಳ್ಳ , ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಚೆಕ್ಕುಬಂಧಿಯ ಒಳಗೆ ಇರುವ 3 ಎಕರೆ 13 ಗುಂಟೆ ಜಮೀನು ವಾದಿಯ ತಂದೆ ರಂಗಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತಿನ ಎ ಷೆಡ್ಯೂಲ್ ಚೆಕ್ಕುಬಂಧಿಯ ಒಳಗಿರುವ 3 ಎಕರೆ 13 ಗುಂಟೆ ಜಮೀನಿನಲ್ಲಿ ನಮಗೆ ಯಾವುದೇ ಹಿಸ್ಸೆ ಇರುವುದಿಲ್ಲ. ಅಳತೆ ಮಾಡುವ ಕಾಲಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದೆ ಹಾಗೂ ಷೆಡ್ಯೂಲ್  ಬಿ ಯಿಂದ ಇ ವರೆಗೆ ಆಗಿರುವ ಒತ್ತುವರಿ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

4. ಎಡಿಎಲ್ ಆರ್ ಚನ್ನಗಿರಿ ನೀಡಿರುವ ಸರ್ವೆ ರಿಪೋರ್ಟ್ ನ ವಿಷಯವನ್ನು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ವಾದಿ ನಮ್ಮ ವಿರುದ್ಧ ಸರ್ವೆ ಕಾರ್ಯಕ್ಕೆ ತಂಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 17-06-2019 ರಂದು ವಾದಿ ನಮ್ಮ ವಿರುದ್ಧ ಬಸವಾಪಟ್ಟಣ ಪೊ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರ

ರಕ್ಷಣೆಯೊಂದಿಗೆ ದಿಃ 19-11-2019 ರಂದು ವಾದಿ ಹದ್ದುಬಸ್ತು ಸರ್ವೆ ಕಾರ್ಯವನ್ನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನಮ್ಮ ಕುಟುಂಬದವರಿಗೂ ತಿಳಿದಿರುವುದಿಲ್ಲ. ದಾವೆ ಹಾಕಿದ ನಂತರ ವಕೀಲರ ಮೂಲಕ ಸರ್ವೆ ವಿಚಾರವನ್ನು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಸರ್ವೆ ಇಲಾಖೆಯವರು ಸರ್ವೆ ನಂಃ 9/1 ರಲ್ಲಿ 16 ಗುಂಟೆ ಜಮೀನನ್ನು ಸರ್ವೆ ನಂಃ 9/3 ರ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆ ಎಂದು ವರದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. 2ನೇ ಪ್ರತಿವಾದಿ ಸರ್ವೆ ನಂಃ 9/1 ರಲ್ಲಿ 10 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಃ 9/1 ರಲ್ಲಿ 1 ¾ ಗುಂಟೆ ಹಾಗೂ 25 ಗುಂಟೆ ಜಮೀನನ್ನು 3 ಮತ್ತು 4ನೇ ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 10-07-2019 ಹಾಗೂ 19-11-2019 ರಂದು ಮಾಡಿದ ಹದ್ದು ಬಸ್ತು ಸರ್ವೆ ವರದಿಯನ್ನು ಪ್ರಸ್ತುತ ದಾವೆ ವಾದಿ ಸಲ್ಲಿಸಿದ ನಂತರದಲ್ಲಿ ನಮಗೆ ವಿಷಯ ತಿಳಿದ ನಂತರ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆಯೇ ಎಂದರೆ ಇಲ್ಲ. ಸರ್ವೇಯರ್ ನೀಡಿದ ನಕ್ಷೆ ವರದಿಯನ್ನು ಎಲ್ಲಿಯೂ ಇಲ್ಲಿಯವರೆಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ . ಅಳತೆ ಮಾಡಿದ ವಿಚಾರ ತಿಳಿದಿದ್ದರೂ ಸಹ ನಾನು ಇತರೆ ಪ್ರತಿವಾದಿಗಳಿಗೆ ಜಾಗವನ್ನು ಬಿಟ್ಟುಕೊಡದಂತೆ ಹೇಳಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ . ಹಾಗಾಗಿ 2 ರಿಂದ 4ನೇ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಬಿ ಯಿಂದ ಇ ವರೆಗೆ ಇರುವ ದಾವಾ ಷೆಡ್ಯೂಲ್ ಸ್ವತ್ತು ಎ ಷೆಡ್ಯೂಲ್ ನ ಭಾಗಗಳು ಎಂದರೆ ಸರಿಯಲ್ಲ.

6. ನಮಗೆ ಬಂದಿರುವ ಜಮೀನಿನ ಚೆಕ್ಕುಬಂಧಿಯ ಒಳಗಿನ ಆಸ್ತಿಯನ್ನು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನನ್ನ ತಂದೆಯ ಮರಣದ ನಂತರ ಆಸ್ತಿ ನಮಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಇಬ್ಬರು ಹೆಣ್ಣು ಮಕ್ಕಳು ಹಾಗು ಇಬ್ಬರು ಗಂಡು ಮಕ್ಕಳು ಇರುತ್ತೇವೆ. ನನ್ನ

ತಂದೆಯ ಮರಣದ ನಂತರ ನಾನು ನನ್ನ ಸೋದರ ಸೋದರಿಯರು ಆಸ್ತಿಯನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ನನ್ನ ತಂದೆ ಖರೀದಿಸಿದ ದಾಖಲೆಗಳು ಇರುತ್ತವೆ. ನನ್ನ ತಂದೆ ಖರೀದಿಸಿದ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ ಕರಿಕಟ್ಟೆ ಬಸವರಾಜು ಜಮೀನು, ಪಶ್ಚಿಮಕ್ಕೆ ವಿ ಶೇಖರಪ್ಪನ ಜಮೀನು, ಉತ್ತರಕ್ಕೆ ಹಳ್ಳ ಹಾಗೂ ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಚೆಕ್ಕುಬಂಧಿಯ ಒಳಗಿನ ವಿಸ್ತೀರ್ಣ 2 ಎಕರೆ 15 ಗುಂಟೆ. ನನ್ನ ಅಜ್ಜನಿಗೆ ನಂತರ ನನ್ನ ತಂದೆಗೆ ಬಂದ ಜಮೀನನ್ನು ನಾನು ಅಳತೆ ಮಾಡಿಸಿರುವುದಿಲ್ಲ. ಹಾಗಾಗಿ ವಸ್ತುಸ್ಥಿತಿ ಸದರಿ ಚೆಕ್ಕುಬಂಧಿಯ ಒಳಗೆ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾವು ನೆಲ ಮಟ್ಟ ಮಾಡುವಾಗ ಒತ್ತುವರಿ ಆಗಿರುವ ವಿಚಾರ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ವಕೀಲರಿಗೆ ತಿಳಿಸಿ ಬರೆಸಿರುವುದಿಲ್ಲ.

7. ನಾವು ನೆಲಸಮ ಮಾಡಿದ ಸ್ಥಳ ಸರ್ವೆ ನಂಃ 9/1 ರ ಒಂದು ಭಾಗ ಎಂದರೆ ಆಗಿರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂಃ 9 ರ ಪೋಡಾಗುವ ಪೂರ್ವದಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 31 ಗುಂಟೆ ಎಂದು ಸಾಕ್ಷಿಯು ನುಡಿದಿದ್ದು ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಃ 9 ರಲ್ಲಿ ಎಷ್ಟು ಪೋಡುಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ಸರ್ವೆ ನಂಃ 9 ರಲ್ಲಿ ಎಷ್ಟು ವಿಸ್ತೀರ್ಣಕ್ಕೆ ಪೋಡುಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಒತ್ತುವರಿ ಮಾಡಿರುವ ಸ್ಥಳವನ್ನು ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದು ಸುಳ್ಳು ತಕರಾರನ್ನು, ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 7 ರಂತೆ ಸರ್ವೆ ಇಲಾಖೆಯವರು ಒತ್ತುವರಿ ಆಗಿರುವ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ವಾದಿ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.